**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 287 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿನ ಅನೇಕ ಹೆದ್ದಾರಿ ರಸ್ತೆಗಳು ಗುಂಡಿಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಹೆದ್ದಾರಿ ರಸ್ತೆಗಳಲ್ಲಿ ರಸ್ತೆ ಗುಂಡಿಗಳು ಬೀಳುತ್ತವೆ; (ವಿವರವಾದ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿನ ಕೆಲವು ಹೆದ್ದಾರಿ ರಸ್ತೆಗಳು ಗುಂಡಿಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹೆದ್ದಾರಿ ರಸ್ತೆಗಳಲ್ಲಿ ಗುಂಡಿಗಳು ಕೆಳಕಂಡ ಕಾರಣಗಳಿಂದ ಉಂಟಾಗುತ್ತವೆ.<br>1. ಅತಿವೃಷ್ಟಿ/ ಜಡಿ ಮಳೆಯ ಕಾರಣ ಹೆದ್ದಾರಿ ರಸ್ತೆಗಳಲ್ಲಿ ಗುಂಡಿಗಳು ಬೀಳುತ್ತವೆ.<br>2. ರಸ್ತೆಗಳನ್ನು ನಿಗದಿತ ಭಾರ ಹೊತ್ತ ವಾಹನ ಸಂಚಾರಕ್ಕೆ ವಿನ್ಯಾಸಿಸಲಾಗಿರುತ್ತದೆ, ಅಧಿಕ ಭಾರ ಹೊತ್ತ ವಾಹನ ಸಂಚಾರದಿಂದ ರಸ್ತೆಗಳಲ್ಲಿ ಗುಂಡಿಗಳು ಉಂಟಾಗುತ್ತವೆ.<br>3. ರಸ್ತೆಗಳಲ್ಲಿ ಇತರೆ ಏಜೆನ್ಸಿಗಳು ಪೈಪ್‌ಲೈನ್, ಕೇಬಲ್ ಮುಂತಾದವುಗಳನ್ನು ಅಳವಡಿಸಲು ರಸ್ತೆ ಅಗೆದು, ಕೆಲಸ ಮುಗಿದ ನಂತರ ರಸ್ತೆಯನ್ನು ಪೂರ್ವ ಸ್ಥಿತಿಗೆ ತರದೇ ಇರುವುದು. |
| ಆ) | ತುಮಕೂರು ಮಾರ್ಗವಾಗಿ ಬೆಂಗಳೂರು ನಗರಕ್ಕೆ ಬರುವ ಬೈಪಾಸ್ ರಸ್ತೆಯಲ್ಲಿ ನೂರಾರು ಗುಂಡಿಗಳು ಬಿದ್ದಿದ್ದು ವಾಹನಗಳನ್ನು ರಸ್ತೆ ಗುಂಡಿಗಳಿಂದ ತಪ್ಪಿಸಿಕೊಳ್ಳಲು ಹೋಗುವ ಸಂದರ್ಭದಲ್ಲಿ ವಾಹನ ಅಪಘಾತ ಸಂಭವಿಸುತ್ತಿದ್ದು ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳಬಹುದಾದ ಕ್ರಮಗಳೇನು; ಮತ್ತು ಯಾವಾಗ ಕೈಗೊಳ್ಳಲಿದೆ; | ತುಮಕೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ-4 ರ ಬೈಪಾಸ್ ಭಾಗದಲ್ಲಿ ಮಳೆಯಿಂದಾಗಿ ಗುಂಡಿಗಳು ಉಂಟಾಗಿದ್ದು, 6 ಪಥದ ನಿರ್ಮಾಣ ಕಾಮಗಾರಿಯ ರಿಯಾಯಿತಿದಾರರಾದ HG Infra Engineering Ltd. ರವರ ವತಿಯಿಂದ ನಿಯಮಿತವಾಗಿ ಗುಂಡಿಮುಕ್ತವಾಗಿ ಸರಿಪಡಿಸಿ ಸುಗಮ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ವಹಿಸಿ ನಿರ್ವಹಣೆ ಮಾಡಲಾಗುತ್ತಿದೆ ಹಾಗೂ ರಸ್ತೆ ಗುಂಡಿಗಳಿಂದಾಗಿ ಅಪಘಾತ ಪ್ರಕರಣಗಳು ವರದಿಯಾಗಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ) | ರಾಜ್ಯ ಹೆದ್ದಾರಿ ನಿರ್ವಹಣೆ ಮತ್ತು ಅವುಗಳ ಬಳಕೆಗೆ ಇರುವ ಮಾನದಂಡಗಳೇನು? | ರಾಜ್ಯ ಹೆದ್ದಾರಿಗಳ ನಿರ್ಮಾಣ ಹಾಗೂ ನಿರ್ವಹಣೆಯನ್ನು IRC ಮಾನದಂಡಗಳು ಹಾಗೂ MORTH ವತಿಯಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗಸೂಚಿ ಗಳನ್ವಯ ಕೈಗೊಳ್ಳಲಾಗುವುದು. |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| | | ರಾಜ್ಯ ಹೆದ್ದಾರಿಗಳ ನಿರ್ಮಾಣ ಕೈಗೊಂಡು ಸುಮಾರು ಮೂರು ವರ್ಷಗಳ ನಂತರ ಹೆದ್ದಾರಿಗಳ ಮೇಲೆ ಬಿದ್ದಿರುವ ಗುಂಡಿಗಳನ್ನು ಮುಚ್ಚಲು / ನಿರ್ವಹಣೆ ಮಾಡಲು ಸರ್ಕಾರದಿಂದ ಒದಗಿಸಲಾಗುವ ಅನುದಾನವನ್ನು ಪ್ರತಿ ಕಿ.ಮೀ.ಗೆ ಅನುದಾನ ನಿಗದಿಪಡಿಸಿ ರಾಜ್ಯ ಹೆದ್ದಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಕರೆದು, ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಿಂದ ನಿರ್ವಹಣೆ ಕೈಗೊಳ್ಳುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. |

ಕಡತ ಸಂಖ್ಯೆ: ಲೋಇ 40 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)

ಲೋಕೋಪಯೋಗಿ ಸಚಿವರು